ಆ) ಈಗ ದೇವಸ್ಥಾನದ ಆಡಳಿತ ನಡೆಸುತ್ತಿರುವ ಸಂಘವು ಯಾವಾಗ ಅಸ್ತಿತ್ವಕ್ಕೆ ಬಂದಿದೆ; ಸದರಿ ಸಂಘ ಕಾನೂನು ಬದ್ಧ ಮತ್ತು ನ್ಯಾಯ ಬದ್ಧ ರೀತಿಯಲ್ಲಿ ಅಸ್ತಿತ್ವಕ್ಕೆ ಬಂದಿದೆಯೇ;

ಇ) ಸದರಿ ಸಂಘದಲ್ಲಿ ದಲಿತರು ಮತ್ತು ಮಹಿಳೆಯರನ್ನು ಸಂಪೂರ್ಣ ಹೊರಗಿಡಲಾಗಿದೆಯೇ; ಕಾರಣವೇನು;

ಈ) ಸಂಘ ಅಸ್ತಿತ್ವಕ್ಕೆ ಬರುವ ಮುನ್ನ ಈ ಹಿಂದೆ ಭಕ್ತಾದಿಗಳೆಲ್ಲರೂ ಆಡಳಿತದಲ್ಲಿ ಭಾಗವಹಿಸುತ್ತಿದ್ದರು, ಈಗಲೂ ಅಂತಹ ವಾತಾವರಣ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ) ಮಾರಿಕಾಂಬ ದೇವಸ್ಥಾನದ ಎಲ್ಲಾ ಭಕ್ತರು ದೇವಸ್ಥಾನದ ಆಡಳಿತದಲ್ಲಿ ಭಾಗವಹಿಸುವಂತೆ ವಾತಾವರಣ ಸೃಷ್ಟಿಸಲು ಸರ್ಕಾರಕ್ಕೆ ಇರುವ ಅಡ್ಡಿಗಳೇನು?

ಶ್ರೀ ವಿ. ಎಸ್. ಆಚಾರ್ಯ (ಉನ್ನತ ಶಿಕ್ಷಣ ಯೋಜನೆ ಸಾಂಖ್ಯಿಕ ಮುಜರಾಯಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):

ಅ) ಇದು ಖಾಸಗಿ ಒಡೆತನಕ್ಕೆ ಸೇರಿರುತ್ತದೆ.

ಆ) ದೇವಸ್ಥಾನದ ಆಡಳಿತ ನಡೆಸುತ್ತಿರುವ ಸಂಘವು 1990–91 ರಿಂದ ನಂ. 156/ಓಎಸ್ಆರ್/ಎಸ್ಎಂಜಿ/90–91 ರಂತೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರಡಿಯಲ್ಲಿ ನೋಂದಾಯಿಸಿ ಆಡಳಿತ ನಡೆಸುತ್ತಿದೆ.

ಇ) ಸಂಘವು ರಚಿತವಾದ ನಿಬಂಧನೆಗಳ ಅನ್ವಯ ಹಿಂದೂ ಜನಾಂಗಕ್ಕೆ ಸೇರಿದ ಯಾವುದೇ ವ್ಯಕ್ತಿ ದೇವಸ್ಥಾನದ ಸದಸ್ಯರಾಗಲು ಅರ್ಹರಿರುತ್ತಾರೆ.

ಈ) ಈ ದೇವಸ್ಥಾನ ಮುಜರಾಯಿ ಇಲಾಖೆಗೆ ಒಳಪಡುವು ದಿಲ್ಲವಾದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಇದು ನೋಂದಾಯಿತ ಸಂಸ್ಥೆಯಾಗಿರುವುದರಿಂದ ಎಲ್ಲಾ ಭಕ್ತರು ದೇವಸ್ಥಾನದ ಆಡಳಿತದಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

ಆರಾಧನಾ ಸಮಿತಿಯ ರಚನೆ ಬಗ್ಗೆ

97(302): ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ): ಮಾನ್ಯ ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು

ಜೈವಿಕ ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತೀರ್ಥಹಳ್ಳಿ ಪಟ್ಟಣದ ಐತಿಹಾಸಿಕ, ರಾಮೇಶ್ವರ ದೇವಸ್ಥಾನದಲ್ಲಿ ರಥೋತ್ಸವ ಪುಣ್ಯಸ್ನಾನ ಹಾಗೂ ತೆಪ್ಪೋತ್ಸವ ನಡೆದುಕೊಂಡು ಬಂದಿದ್ದು, ತಾಲ್ಲೂಕು ತಹಶೀಲ್ದಾರ್‌ರ ಮಾರ್ಗದರ್ಶನದಲ್ಲಿ ಜನಪ್ರತಿನಿಧಿಗಳು ಭಕ್ತಾದಿಗಳು ಸೇರಿ ಸಮಿತಿ ನಡೆಸುತ್ತಿತ್ತು. ಸದರಿ ಸಮಿತಿಯು ಮುಂದುವರೆಯುತ್ತಿರುವುದು ನಿಜವಲ್ಲವೇ?

ಆ) ಆರಾಧನಾ ಸಮಿತಿ ಅಥವಾ ಸಾರ್ವಜನಿಕ ಸಮಿತಿಯಿಂದ ಮೇಲ್ಕಂಡ ಕಾರ್ಯಕ್ರಮಕ್ಕೆ ಅಭಿವೃದ್ಧಿ ದೊರಕಿಸುವ ಉದ್ದೇಶ ಇದೆಯೇ; ಇಲ್ಲದಿದ್ದಲ್ಲಿ ಕಾರಣವೇನು?

ಇ) ಸಾರ್ವಜನಿಕರನ್ನು ಭಕ್ತಾದಿಗಳನ್ನು ಜನ ಪ್ರತಿನಿಧಿಗಳನ್ನು ಸಂಪೂರ್ಣ ಹೊರಗಿಟ್ಟು ಹಣಕಾಸು ವ್ಯವಹಾರ ನಡೆಸುತ್ತಿರುವ ತಹಶೀಲ್ದಾರ್ ಕ್ರಮಕ್ಕೆ ಸರ್ಕಾರದ ನಿರ್ದೇಶನ ಇದೆಯೇ? (ವಿವರ ನೀಡುವುದು):

ಶ್ರೀ ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):

ಅ) ನಿಜವಲ್ಲ.

ಆ) ಅಂತಹ ಉದ್ದೇಶ ಇರುವುದಿಲ್ಲ. ಆರಾಧನಾ ಸಮಿತಿಯಿಂದ ಅಭಿವೃದ್ಧಿ ಪಡಿಸಲು ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ. ಆದರೆ ಸಾರ್ವಜನಿಕರನ್ನು ದೇವಸ್ಥಾನದ ಅಭಿವೃದ್ಧಿ ಕಾರ್ಯಕ್ಕೆ ಮಾತ್ರ ತೊಡಗಿಸಿಕೊಳ್ಳಬಹುದಾಗಿದೆ.

ಇ) ಸದರಿ ದೇವಸ್ಥಾನದ ಆಡಳಿತಕ್ಕಾಗಿ ವ್ಯವಸ್ಥಾಪನ ಸಮಿತಿಯನ್ನು ದಿನಾಂಕ: 10.4.2006 ರಂದು ಮೂರು ವರ್ಷಗಳ ಅವಧಿಗೆ ರಚಿಸಲಾಗಿದ್ದು, ಸದರಿ ಸಮಿತಿಯ ಅವಧಿಯು ದಿನಾಂಕ: 9.4.2009ಕ್ಕೆ ಮುಕ್ತಾಯ ಗೊಂಡಿರುತ್ತದೆ. ಮುಜರಾಯಿ ಇಲಾಖೆಯ ಯಾವುದೇ ದೇವಾಲಯಗಳಿಗೆ ಆಡಳಿತ ಸಮಿತಿಯನ್ನು ನೇಮಕ ಮಾಡದಂತೆ ದಿನಾಂಕ: 31.7.2009ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿರುವುದರಿಂದ ವ್ಯವಸ್ಥಾಪನ ಸಮಿತಿಯನ್ನು ನೇಮಿಸಲು ಸಾಧ್ಯವಾಗದ ಪ್ರಯುಕ್ತ ಸದರಿ ದೇವಾಲಯಕ್ಕೆ ತಹಸೀಲ್ದಾರರು ತೀರ್ಥಹಳ್ಳಿ ತಾಲ್ಲೂಕು ರವರನ್ನು

ಉಪವಿಭಾಗಾಧಿಕಾರಿ ಶಿವಮೊಗ್ಗ, ಇವರು ಆಡಳಿತಾಧಿಕಾರಿಯನ್ನು ನೇಮಕ ಮಾಡಿ ಆದೇಶಿಸಿರುತ್ತಾರೆ. ಅದರಂತೆ ತಹಸೀಲ್ದಾರರು ದೇವಸ್ಥಾನದ ಹಣಕಾಸಿನ ವ್ಯವಹಾರವನ್ನು ನಿರ್ವಹಿಸುತ್ತಿದ್ದಾರೆ.

ಮೂಲಭೂತ ಸೌಕರ್ಯದ ಬಗ್ಗೆ

98(303): ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯಗಳನ್ನು ಸರ್ಕಾರ ಎಲ್ಲಾ ಶಾಲೆಗಳಿಗೆ ಒದಗಿಸಿದೆಯೇ;

ಆ) ಇಲ್ಲದಿದ್ದಲ್ಲಿ ಅವುಗಳನ್ನು ಎಷ್ಟು ಸಮಯದೊಳಗೆ ಒದಗಿಸಲಾಗುತ್ತದೆ;

ಇ) ಮೇಲ್ಕಂಡ ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರಕ್ಕೆ ಹಣಕಾಸಿನ ಕೊರತೆ ಇದೆಯೇ;

ಈ) ಮೇಲ್ಕಂಡ ಮೂಲಭೂತ ಸೌಕರ್ಯ ಒದಗಿಸಲು ಶಾಲಾಭಿವೃದ್ಧಿ ಸಮಿತಿಗಳಿಗೆ ಅವಕಾಶ ಅಥವಾ ಅನುಮತಿ ನೀಡಲಾಗಿದೆಯೇ;

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) 2010-11ನೇ ಸಾಲಿನಲ್ಲಿ ಪಂಚಸೌಲಭ್ಯದಡಿ ಕೊಠಡಿ, ಕುಡಿಯುವ ನೀರು, ಶೌಚಾಲಯ, ಕಾಂಪೌಂಡ್ ಹಾಗೂ ಪೀಠೋಪಕರಣಗಳಿಗಾಗಿ 5875.67 ಲಕ್ಷ ರೂ.ಗಳ ಅನುದಾನ ಒದಗಿಸಲಾಗಿದೆ. ಹಾಗೂ ಡಾ: ನಂಜುಂಡಪ್ಪ ವರದಿ ಅನ್ವಯ ಹಿಂದುಳಿದ ಜಿಲ್ಲೆಗಳಿಗೆ ಸರ್ಕಾರಿ ಪ್ರೌಢ ಶಾಲೆಗಳಿಗೆ ಕುಡಿಯುವ ನೀರು ಶೌಚಾಲಯಕ್ಕಾಗಿ 624.25 ಲಕ್ಷ ರೂ.ಗಳ ಅನುದಾನ ಒದಗಿಸಲಾಗಿದೆ. ಎಲ್ಲ ಶಾಲೆಗಳಿಗೆ ಹಂತ ಹಂತವಾಗಿ ಒದಗಿಸಲಾಗುತ್ತಿದೆ.

ಆ) ಕಾಲಕಾಲಕ್ಕೆ ಅನುದಾನ ಲಭ್ಯತೆಯೊಂದಿಗೆ ಒದಗಿಸಲಾಗುತ್ತಿದೆ.

ಇ) ಇಲ್ಲ.